

ನೋವು ಕಡಿಮೆ ಎಂದು ಗುರುತಿಸುವುದಾದರೂ ಹೇಗೆ? ಆ ಕ್ಷಣದಲ್ಲಿ ನನಗೆ ಏನಾಗಿತ್ತು, ಹೇಗೆ ನಿಭಾಯಿಸಿದೆ ಎಂಬುದು ಇಂದಿಗೂ ಸೋಜಿಗ. ಅಂದಿನ ರಾತ್ರಿ ಪಾಳಿ ಕೆಲಸ ಮುಗಿದ ಮೇಲೆ ಅದೆಷ್ಟೋ ಹೊತ್ತು ಅಳುತ್ತಲೇ ಇದ್ದೆ. ಆ ಒತ್ತಡ, ಅಪಘಾತಕ್ಕೀಡಾದವರ ನೋವು ನನ್ನನ್ನು ಹಿಂಡಿ ಹಿಪ್ಪೆ ಮಾಡಿತ್ತು.

ನಮ್ಮ ನಿಷ್ಕಾಳಜಿಯ ಕಾರಣದಿಂದ ಕಣ್ಮುಂದೆ ಜೀವವೊಂದು ಕೊನೆಯುಸಿರೆಳೆದುಬಿಟ್ಟರೆ ಎಂಬ ಭಯ ಸದಾ ಇರುತ್ತದೆ. ಜಾಗೃತರಾಗಿರಲು ಅಂತಹ ಸಣ್ಣ ಭಯ ಬೇಕು. ಆದರೆ ಒಬ್ಬರಿಗೆ ನಿಭಾಯಿಸಲಾಗದಷ್ಟು ಪೇಷಂಟ್‌ಗಳು ಕಣ್ಣ ಮುಂದೆ ನರಳುತ್ತಿದ್ದರೆ ದಿಕ್ಕು ತೋಚದಾಗುತ್ತದೆ. ರೋಗಿಗೆ ನಾವು ಇಂಜೆಕ್ಷನ್ ಕೊಟ್ಟಾಕ್ಷಣ ನೋವು ಕಡಿಮೆಯಾಗಿ ಆಯಾಸಭರಿತ ಕಣ್ಣುಗಳನ್ನು ನಮ್ಮತ್ತ ಹೊರಳಿಸಿ ಕಿರುನಗು ಬೀರುವಾಗ ವೃತ್ತಿಯ ಬಗ್ಗೆ ಹೆಮ್ಮೆ ಮೂಡುತ್ತದೆ.

ಚಿಕಿತ್ಸೆಗೆ ಬೇಕಾದಷ್ಟು ಹಣವಿಲ್ಲ ಎಂದು ಪೇಷಂಟ್ ಕಡೆಯವರು ಹೇಳಿದಾಗ ನಿರ್ದಯವಾಗಿ ಆಸ್ಪತ್ರೆಯಿಂದ ಹೊರದೂಡುತ್ತಾರಲ್ಲ, ಅದಕ್ಕಿಂದ ದುಃಖದ ಕ್ಷಣ ಮತ್ತೊಂದಿಲ್ಲ. ಒಮ್ಮೆ ಹಾಗೆ ಆಯಿತು, ಆಕ್ಸಿಡೆಂಟ್ ಪ್ರಕರಣವೊಂದು ಬಂದಿತ್ತು. ತಲೆಗೆ ತುಂಬಾ ಏಟಾಗಿತ್ತು. ಮೆದುಳಿಗೆ ಹಾನಿಯಾಗಿರುವುದು ವೈದ್ಯರಿಗೆ ಪರೀಕ್ಷೆ ಮುನ್ನವೇ ಸ್ಪಷ್ಟವಾಗಿತ್ತು. ವೈದ್ಯರು, 'ಸರ್ಜರಿಗಾಗಿ ಒಂದಷ್ಟು ಲಕ್ಷಗಳು ಆಗುತ್ತದೆ' ಎಂದರು. ಅಪಘಾತಕ್ಕೀಡಾದವರ ಮನೆಯವರು ತಮ್ಮ ಬಳಿ ಹಣವಿಲ್ಲ ಎಂದು ಹೇಳಿದಾಕ್ಷಣವೇ ಬಾಗಿಲಿಂದಾಚೆಗೆ ವಾಪಸ್ಸು ಕಳುಹಿಸಿದರು. ಹಣವಿದ್ದರೆ ಮಾತ್ರ ಆಸ್ಪತ್ರೆಗಳು ಚಿಕಿತ್ಸೆ ನೀಡುತ್ತವೆ. ಹಣವಿದ್ದವರಿಗೆ ಮಾತ್ರ ವೈದ್ಯರಲ್ಲಿನ ದೇವರು ದರ್ಶನ ಕೊಡುತ್ತಾನೆ. ಯಾರ ಬಳಿ ಹಣವಿದೆಯೋ ಅವರಿಗೆ ಮಾತ್ರ ಚಿಕಿತ್ಸೆ ಎಂಬುದನ್ನು ನೋಡಿದರೆ, ವೈದ್ಯಕೀಯ ಎಂಬುದು ಎಲ್ಲ ಕಡೆಯಲ್ಲಿಯೂ ಸೇವೆ ಆಗಿರುವುದಿಲ್ಲ, ಉದ್ಯಮವಾಗಿರುತ್ತದೆ ಎಂಬುದು ಅರ್ಥವಾಗುತ್ತದೆ.

ಸರ್ಜರಿ, ಹೆರಿಗೆ ಮುಂತಾದ ಕೇಸ್‌ಗಳಲ್ಲಿ ವೈದ್ಯರು ನೇರವಾಗಿ ತಾವೇ ಕೆಲಸ ಮಾಡುತ್ತಾರೆ. ಇತರ ಪ್ರಕರಣಗಳಲ್ಲಿ ವೈದ್ಯರು ನರ್ಸ್‌ಗಳಿಗೆ ಸೂಚನೆ ಕೊಟ್ಟು ಅವರಿಂದ ಕೆಲಸ ಮಾಡಿಸುತ್ತಾರೆ. ವೈದ್ಯಕೀಯ ವೃತ್ತಿಯಲ್ಲಿ ರೋಗಿಯ ಬಹುಪಾಲು ಕೆಲಸ ಮಾಡುವುದು ನರ್ಸ್‌ಗಳು. ಒಂದಷ್ಟು ವರ್ಷ ವೃತ್ತಿ ಅನುಭವ ಹೊಂದಿದ ಚುರುಕಾದ ನರ್ಸ್‌ಗಳು ವೈದ್ಯರಿಗಿಂತ ಹೆಚ್ಚು ನೈಪುಣ್ಯ ಹೊಂದಿರುತ್ತಾರೆ. ಆಗಷ್ಟೇ ವೃತ್ತಿಯನ್ನು ಆರಂಭಿಸಿದ ವೈದ್ಯರಿಗೆ ಅನುಭವಿ ನರ್ಸ್‌ಗಳು ಒಂದು ರೀತಿಯ ತರಬೇತುದಾರರಾಗಿ ಕೆಲಸ ಮಾಡುತ್ತಾರೆ. ಆದರೆ ಸಂಬಳದಲ್ಲಾಗಲೀ ಸಾಮಾಜಿಕ ಜೀವನದಲ್ಲಾಗಲೀ ವೈದ್ಯರಿಗೆ ಸಿಕ್ಕಷ್ಟು ಪ್ರಾಮುಖ್ಯ ನರ್ಸ್‌ಗಳಿಗೆ ಇಲ್ಲ.

ವೈದ್ಯಕೀಯ ರಂಗ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಆದ್ದರಿಂದ ನರ್ಸಿಂಗ್ ಓದಿದ ನಂತರ ಎಲ್ಲಾದರೂ ಕೆಲಸ ಸಿಕ್ಕೇ ಸಿಗುತ್ತದೆ ಎಂಬ ನಂಬಿಕೆ ಎಲ್ಲರಲ್ಲೂ ಇದೆ. ಬೇರೆ ಕೋರ್ಸ್‌ಗಳಿಗೆ ಹೋಲಿಸಿದರೆ ನರ್ಸಿಂಗ್ ಓದಿದವರು ಕೆಲಸ ಇಲ್ಲದೆ ಖಾಲಿ ಕುಳಿತಿರುವವರು ಇಲ್ಲವೇ ಇಲ್ಲ ಎನ್ನಬಹುದು. ಚೆನ್ನಾಗಿ ಕೆಲಸ ಮಾಡಿದರೆ ವೃತ್ತಿ ಅಭದ್ರತೆ ಎಂಬುದಿಲ್ಲ. ಆದರೆ ಸರ್ಕಾರಿ ನರ್ಸ್ ಆಗಬೇಕೆಂಬ ಕನಸು ಅಷ್ಟು ಸುಲಭವಲ್ಲ. ಅದಕ್ಕೆ ನಾನೇ ಸಾಕ್ಷಿ. ಕೋವಿಡ್ ವೇಳೆ ನಮ್ಮನ್ನು ಬಳಸಿಕೊಂಡ ಸರ್ಕಾರ ಈಗ ಸೇವೆಯಿಂದ ಹೊರದೂಡಿದೆ. ಹೀಗೆ ಕೆಲಸ ಕಳೆದುಕೊಂಡವರ ಸಂಖ್ಯೆ ಸುಮಾರು ಏಳು ಸಾವಿರ. ಸಾಕಷ್ಟು ಸಂಖ್ಯೆಯ ನರ್ಸಿಂಗ್ ಆಫೀಸರ್ ಹುದ್ದೆಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವಾಗ, ಈಗಾಗಲೇ ಪ್ರಾಣ ಪಣಕ್ಕಿಟ್ಟು ಕೆಲಸ ಮಾಡಿದ 7000 ಜನರನ್ನು ಕಾಯಂ ಮಾಡುವುದು ಅಸಾಧ್ಯವಾದುದೇನೂ ಅಲ್ಲ.

ತಾಯಿಯೊಬ್ಬಳು ಮಗುವನ್ನು ಹೆತ್ತು, ನಿದ್ರೆಗೆಟ್ಟು ಹಾಲು ಕುಡಿಸಿ, ಮಲಮೂತ್ರ ಬಳಿದು, ಕಣ್ಣಲ್ಲಿ ಕಣ್ಣಿಟ್ಟು ಕಾಪಾಡಿದ ನಂತರ, ಮಗು ದೊಡ್ಡದಾಗಿ, 'ತಾಯ್ತನ ನಿನಗೆ ಕಷ್ಟ ಅನಿಸಲಿಲ್ಲವಾ?' ಎಂದು ಕೇಳಿದರೆ ತಾಯಿ ಏನನ್ನುತ್ತಾಳೆ? ಭಾವುಕ ತಾಯಂದಿರು 'ಇಲ್ಲ' ಅನ್ನಬಹುದು. ವಾಸ್ತವವಾಗಿ ಆಲೋಚಿಸುವ ತಾಯಂದಿರು, 'ಕಷ್ಟ ಅನಿಸಿರುತ್ತದೆ. ಆದರೆ ಖುಷಿಯೇ ಹೆಚ್ಚಿತ್ತು' ಅನ್ನಬಹುದು. ನಾನೂ ವಾಸ್ತವವಾದಿಯಾಗಿ 'ಎಲ್ಲಾ ಕಷ್ಟಗಳ ನಂತರವೂ ನೆಮ್ಮದಿಯಿದೆ' ಎನ್ನುತ್ತೇನೆ. ನರ್ಸಿಂಗ್ ನನ್ನದೇ ಆಯ್ಕೆ. ಇಲ್ಲಿ ಎಷ್ಟೋ ಕಷ್ಟ ನಷ್ಟ ಕಂಡಮೇಲೂ ಈ ವೃತ್ತಿಯ ಬಗ್ಗೆ ನನಗೆ ಹೆಮ್ಮೆ ಇದೆ. ■

